

# ನರ್ಮದಾ-ಕಾವೇರಿ ಸಂಗಮದ ಓಂಕಾರೇಶ್ವರ



ಓಂಕಾರೇಶ್ವರ ಜ್ಯೋತಿರ್ಲಿಂಗ

ಮಧ್ಯಪ್ರದೇಶದ ಓಂಕಾರೇಶ್ವರ ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದು. ಪುರಾತನ ಮಂದಿರದ ಜೊತೆಗೆ, ನರ್ಮದಾ–ಕಾವೇರಿ ನದಿಗಳ ಸಂಗಮ ಸೃಷ್ಟಿಸಿರುವ ಅಪೂರ್ವ ಜ್ಯೋತಿರ್ಲಿಂಗ ದರ್ಶನದ ಪ್ರವಾಸವನ್ನು ಅವಿಸ್ಮರಣೀಯಗೊಳಿಸುತ್ತದೆ.

■ ಪ್ರಶಾಂತ್ ಎಸ್. ಭಟ್

ಭಾರತೀಯ ಪುರಾಣಕಥನಗಳ ಪ್ರಕಾರ ಓಂಕಾರೇಶ್ವರ ಜ್ಯೋತಿರ್ಲಿಂಗವು ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದು. ಇದು ಮಧ್ಯಪ್ರದೇಶದ ಗಢವಾ ಜಿಲ್ಲೆಯಲ್ಲಿದೆ. ನಾಸಿಕದ ತ್ರಯಂಬಕೇಶ್ವರ, ಎಲ್ಲೋರಾದ ಗ್ರೀಷ್ಮೇಶ್ವರ ಹಾಗೂ ಭೀಮಾಶಂಕರ ಜ್ಯೋತಿರ್ಲಿಂಗಗಳನ್ನು ನಾವು ಈ ಮುಂಚೆಯೇ ನೋಡಿಯಾಗಿತ್ತು. ಹಿಂದಿನ ವರ್ಷ ಗುಜರಾತ್‌ನ ಸೋಮನಾಥೇಶ್ವರ ಹಾಗೂ ನಾಗೇಶ್ವರ ಜ್ಯೋತಿರ್ಲಿಂಗಗಳ ದರ್ಶನ ಮಾಡಿದ್ದೆವು. ಈ ಬಾರಿಯ ಸರದಿ ಓಂಕಾರೇಶ್ವರನದು.

ಬೆಂಗಳೂರಿನಿಂದ ಬೆಳಿಗ್ಗೆ 5ರ ಸುಮಾರಿಗೆ ಹೊರಟ ವಿಮಾನ 7.10ಕ್ಕೆ ಇಂದೋರಿನ ಅಹಲ್ಯಾಬಾಯಿ ಹೋಳ್ಕರ್ ವಿಮಾನ ನಿಲ್ದಾಣ ತಲುಪಿತ್ತು. ಈ ವಿಮಾನನಿಲ್ದಾಣ ಬೆಂಗಳೂರಿಗೆ ಹೋಲಿಸಿದರೆ ಚಿಕ್ಕದಾಗಿದ್ದರೂ ಸುಂದರವಾಗಿತ್ತು. ಗೋಡೆಗಳ ತುಂಬ ಉತ್ತರ ಪ್ರದೇಶದ ಪ್ರವಾಸಿ ತಾಣಗಳ ಚಿತ್ರಗಳು. ಇಂದೋರಿನಿಂದ ಕ್ಯಾಬ್ ಮೂಲಕ ಓಂಕಾರೇಶ್ವರಕ್ಕೆ ಪ್ರಯಾಣ ಬೆಳೆಸಿದೆವು. ಸುಮಾರು 2 ತಾಸಿನ ಪಯಣ, 80 ಕಿ.ಮೀ. ಪರಿಕ್ರಮಣ, ರಸ್ತೆ ಚೆನ್ನಾಗಿತ್ತು. ಮಧ್ಯದಲ್ಲಿ ಸ್ವಲ್ಪ ಕಡಿದಾದ ದಾರಿ ಇದ್ದರೂ ಅಷ್ಟೊಂದು ಕಷ್ಟವಾಗಲಿಲ್ಲ.

ಓಂಕಾರೇಶ್ವರ ಒಂದು ಯಾತ್ರಾಸ್ಥಳವಾಗಲು ಕಾರಣ ಅದು ನರ್ಮದಾ ಹಾಗೂ ಕಾವೇರಿ (ನಮ್ಮ ಕಾವೇರಿಯಲ್ಲ; ಮತ್ಸ್ಯಪುರಾಣದಲ್ಲಿ ಈ ನದಿಯ ಉಲ್ಲೇಖವಿದೆ) ನದಿಗಳ ಸಂಗಮ ಸ್ಥಳವಾಗಿರುವುದು. ಸ್ಥಳಪುರಾಣದಂತೆ ಒಮ್ಮೆ ನಾರದರು ವಿಂಧ್ಯಪರ್ವತದಲ್ಲಿ ತಿರುಗಾಡಲು ಬಂದಾಗ ಶಿವನಿಗೆ ಎಲ್ಲೂ ವಾಸಿಸಲು ಸ್ಥಳವಿಲ್ಲದುದನ್ನು ಮನಗಂಡು ಪರ್ವತರಾಜನಲ್ಲಿ ಬಿನ್ನವಿಸಿಕೊಳ್ಳುತ್ತಾರೆ. ನಂತರ ಶಿವನು ಇವರಿಬ್ಬರ ಕರೆಗೆ ಹಾಗೂ ಆತಿಥ್ಯಕ್ಕೆ ಮೆಚ್ಚಿ ಇಲ್ಲಿಯ ಓಂಕಾರ ಆಕಾರಲ್ಲಿರುವ ಮಾಂದಾತಾ ದ್ವೀಪದಲ್ಲಿ ಜ್ಯೋತಿರ್ಲಿಂಗವಾಗಿ ಕಾಣಿಸಿಕೊಂಡ. ಇನ್ನೊಂದು ಪೌರಾಣಿಕ ಕಥೆಯ ಅನುಸಾರ ಮಾಂದಾತಾ ಎಂಬ ರಾಜನ ಕಠೋರ ತಪಸ್ಸಿಗೆ ಮೆಚ್ಚಿ ಶಿವನು ಇಲ್ಲಿ ಜ್ಯೋತಿರ್ಲಿಂಗವಾಗಿ ಕಾಣಿಸಿಕೊಂಡನಂತೆ.

ನಾವು 500 ರೂಪಾಯಿ ತೆತ್ತು ಯಾಂತ್ರಿಕ ದೋಣಿಯಲ್ಲಿ ಒಂದು ಸುತ್ತುಹಾಕಿ